ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1295
ಸದಸ್ಯರ ಹೆಸರು : ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ : 15.03.2021
ಉತ್ತರಿಸುವವರು : ಅರಣ್ಯ, ಕನ್ನಡ ಮತ್ತು ಸಂಸ್ಕೃತಿ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ರಾಮನಗರ ಜಿಲ್ಲಾ ವ್ಯಾಪ್ತಿಯ ಕಂದಾಯ ಇಲಾಖೆಯ ಸಿ ಮತ್ತು ಡಿ ವರ್ಗದ ಯಾವ ಯಾವ ಸರ್ವೆ ನಂಬರ್ ಜಮೀನುಗಳನ್ನು ಅರಣ್ಯ ಇಲಾಖೆಗೆ ಹಸ್ತಾಂತರಿಸಲು ಅರಣ್ಯ ಕಾಯ್ದೆ ಸೆಕ್ಷನ್ 4 ರಡಿಯಲ್ಲಿ ಅಧಿಸೂಚನೆ ಹೊರಡಿಸಲಾಗಿದೆ; (ಗ್ರಾಮವಾರು ವಿವರ ನೀಡುವುದು)	ರಾಮನಗರ ಅರಣ್ಯ ವಿಭಾಗ ವ್ಯಾಪ್ತಿಯಲ್ಲಿ ಕಂದಾಯ ಇಲಾಖೆಯ ಸಿ ಮತ್ತು ಡಿ ವರ್ಗದ ಸರ್ವೆ ನಂಬರ್ ಜಮೀನುಗಳನ್ನು ಅರಣ್ಯ ಇಲಾಖೆಗೆ ಹಸ್ತಾಂತರಿಸಿ, ಅರಣ್ಯ ಕಾಯ್ದೆ ಸೆಕ್ಷನ್ 4 ರಡಿಯಲ್ಲಿ ಅಧಿಸೂಚನೆ ಹೊರಡಿಸಲಾಗಿರುವ ಜಮೀನುಗಳ ವಿವರಗಳನ್ನು ಅನುಬಂಧ-1 ರಲ್ಲಿ ಒದಗಿಸಿದೆ.
ಆ)	ಅರಣ್ಯ ಕಾಯ್ದೆ ಸೆಕ್ಷನ್ 4 ರಡಿಯಲ್ಲಿ ಅಧಿಸೂಚನೆ ಹೊರಡಿಸಿದ ನಂತರ ಎಷ್ಟು ಜಮೀನುಗಳನ್ನು ಸೆಕ್ಷನ್ 17 ರಡಿಯಲ್ಲಿ ಅಂತಿಮ ಅಧಿಸೂಚನೆ ಹೊರಡಿಸಿ ಅರಣ್ಯ ಇಲಾಖೆಗೆ ಹಸ್ತಾಂತರಿಸಲಾಗಿದೆ; (ಗ್ರಾಮವಾರು ವಿವರ ನೀಡುವುದು)	ಅನುಬಂಧ-1 ರಲ್ಲಿ ವಿವರಿಸಿರುವ ಅರಣ್ಯ ಕಾಯ್ದೆ ಸೆಕ್ಷನ್ 4ರ ಅಧಿಸೂಚಿತ ಪ್ರದೇಶಗಳನ್ನು ಸೆಕ್ಷನ್ 17 ರಡಿಯಲ್ಲಿ ಘೋಷಿಸುವುದು ಬಾಕಿಯಿದ್ದು, ಅರಣ್ಯ ಇಲಾಖೆಗೆ ಹಸ್ತಾಂತರವಾಗಿರುವುದಿಲ್ಲ.
ಇ)	ಸಿ ಮತ್ತು ಡಿ ವರ್ಗದ ಜಮೀನುಗಳನ್ನು ಅರಣ್ಯ ಕಾಯ್ದೆ ಸೆಕ್ಷನ್ 4 ರಡಿಯಲ್ಲಿನ ಅಧಿಸೂಚನೆ ಹೊರಡಿಸುವ ಸಂಬಂಧ ಉಪವಿಭಾಗಾಧಿಕಾರಿಗಳನ್ನು ಫಾರೆಸ್ಟ್ ಸೆಟಲ್‌ಮೆಂಟ್ ಅಧಿಕಾರಿಯಾಗಿ ಸರ್ಕಾರವು ನೇಮಿಸಿದ್ದು, ಉಪವಿಭಾಗಾಧಿಕಾರಿಗಳವರು ಈವರೆವಿಗೂ ವಿಚಾರಣೆ ನಡೆಸಿ ಎಷ್ಟು ಜಮೀನನ್ನು ಅರಣ್ಯ ಕಾಯ್ದೆ ಸೆಕ್ಷನ್ 17 ರಡಿಯಲ್ಲಿ ಅಂತಿಮ ಅಧಿಸೂಚನೆ ಹೊರಡಿಸಲು ತೀರ್ಮಾನಿಸಿ ಹಾಗೂ ತಿರಸ್ಕರಿಸಲು ತೀರ್ಮಾನಿಸಲಾಗಿರುವ ಜಮೀನು ಎಷ್ಟು;	ಅರಣ್ಯ ಕಾಯ್ದೆ ಸೆಕ್ಷನ್ 17 ರಡಿಯಲ್ಲಿ ಅಂತಿಮ ಅಧಿಸೂಚನೆ ಹೊರಡಿಸುವ ಬಗ್ಗೆ ಅರಣ್ಯ ವ್ಯವಸ್ಥಾಪನೆ ನಡೆಸಲು ಉಪ ವಿಭಾಗಾಧಿಕಾರಿಗಳು, ರಾಮನಗರ ಉಪ ವಿಭಾಗ, ರಾಮನಗರ ಜಿಲ್ಲೆ ಇವರು ಅರಣ್ಯ ವ್ಯವಸ್ಥಾಪನಾಧಿಕಾರಿಗಳಾಗಿರುತ್ತಾರೆ. ಸದರಿಯವರಿಂದ ಸೆಕ್ಷನ್ 17 ರಡಿ ಅಂತಿಮ ಅಧಿಸೂಚನೆ ಹೊರಡಿಸಲು ಬಾಕಿಯಿರುವ ಪ್ರಕರಣಗಳ ವಿವರ ಪಡೆಯಲಾಗುವುದು.
ಈ)	ಅರಣ್ಯ ಕಾಯ್ದೆ ಸೆಕ್ಷನ್ 4 ರಡಿಯಲ್ಲಿ ಪ್ರಾಥಮಿಕ ಅಧಿಸೂಚನೆ ಹೊರಡಿಸಿ ಸುಮಾರು 15 ರಿಂದ 20 ವರ್ಷ ಕಳೆದರೂ ಸೆಕ್ಷನ್ 17 ರಡಿಯಲ್ಲಿ ಅಂತಿಮ ಅಧಿಸೂಚನೆ ಹೊರಡಿಸದೇ ದೀರ್ಘ ಕಾಲದ ವಿಳಂಬವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.

ಉ)	ವಿಳಂಬವಾಗಿರುವ ಪ್ರಕರಣಗಳನ್ನು ಶೀಘ್ರವಾಗಿ ಇತ್ಯರ್ಥಪಡಿಸಲು ಸರ್ಕಾರ ತೆಗೆದುಕೊಂಡಿರುವ ನಿಲುವೇನು;	ವಿಳಂಬವಾಗಿರುವ ಪ್ರಕರಣಗಳನ್ನು ಶೀಘ್ರವಾಗಿ ಇತ್ಯರ್ಥಪಡಿಸಲು ಹೊಸದಾಗಿ ರಾಜ್ಯದಲ್ಲಿ 10 ಮಂದಿ ಅರಣ್ಯ ವ್ಯವಸ್ಥಾಪನಾಧಿಕಾರಿಗಳ ನೇಮಕಾತಿಗೆ ಆದೇಶ ಸಂಖ್ಯೆ:ಅಪಜೀ-171-ಅಪಸೇ-2018,ದಿನಾಂಕ 31.07.2019 ರಲ್ಲಿ ಅಧಿಸೂಚನೆ ಹೊರಡಿಸಿದ್ದು, ಅದರಂತೆ ಈಗಾಗಲೇ 6 ಮಂದಿ ಅರಣ್ಯ ವ್ಯವಸ್ಥಾಪನಾಧಿಕಾರಿಗಳನ್ನು ನೇಮಕಾತಿ ಮಾಡಿಕೊಂಡಿದ್ದು, ಅದರಲ್ಲಿ 5 ಮಂದಿ ಅರಣ್ಯ ವ್ಯವಸ್ಥಾಪನಾಧಿಕಾರಿಗಳು ಕರ್ತವ್ಯ ನಿರ್ವಹಿಸುತ್ತಿದ್ದು, ಬಾಕಿ ಇರುವ ಪ್ರಕರಣಗಳಿಗೆ ಅರಣ್ಯ ವ್ಯವಸ್ಥಾಪನಾ ಪ್ರಕ್ರಿಯೆ ಪ್ರಾರಂಭಿಸಲಾಗಿರುತ್ತದೆ.
ಊ)	ಈಗಾಗಲೇ ಅರಣ್ಯ ಕಾಯ್ದೆ ಸೆಕ್ಷನ್ 4 ರಡಿಯಲ್ಲಿ ಪ್ರಾಥಮಿಕ ಅಧಿಸೂಚನೆ ಹೊರಡಿಸಿರುವ ಹಲವು ಸರ್ವೆ ನಂಬರ್ ಜಮೀನುಗಳು ಅರಣ್ಯ ಲಕ್ಷಣಗಳನ್ನು ಕಳೆದುಕೊಂಡಿದ್ದು, ಸದರಿ ಜಮೀನನ್ನು ಕಂದಾಯ ಇಲಾಖೆಗೆ ವಾಪಸ್ಸು ಪಡೆಯಲು ಸರ್ಕಾರವು ತೀರ್ಮಾನ ಕೈಗೊಳ್ಳುವುದೇ?	ಈಗಾಗಲೇ ಅರಣ್ಯ ಕಾಯ್ದೆ ಸೆಕ್ಷನ್-4ರಡಿಯಲ್ಲಿ ಪ್ರಾಥಮಿಕ ಅಧಿಸೂಚನೆ ಹೊರಡಿಸಿರುವ ಪ್ರದೇಶಗಳು ಅರಣ್ಯ ಲಕ್ಷಣಗಳನ್ನು ಕಳೆದುಕೊಂಡಿದ್ದರೂ ಸಹ ಸದರಿ ಪ್ರದೇಶಗಳು ಮಾನ್ಯ ಸರ್ವೋಚ್ಚ ನ್ಯಾಯಾಲಯದ WP(civil) 202/1995 (ಹಾಗೂ WP (civil) 171/1996)ರ ತೀರ್ಪಿನಲ್ಲಿ ವಿವರಿಸಿರುವ **"ಅರಣ್ಯ"** ಪದದ ಪರಿಭಾಷೆಗೆ ಒಳಪಟ್ಟಿದ್ದು, ಅರಣ್ಯ ಸಂರಕ್ಷಣಾ ಕಾಯ್ದೆ-1980ರಡಿ ಬರುವುದರಿಂದ ಅರಣ್ಯ ಸಂರಕ್ಷಣಾ ಕಾಯ್ದೆ-1980 ರಂತೆ ಕೇಂದ್ರ ಸರ್ಕಾರದ (MoEF) ಪೂರ್ವಾನುಮತಿ ಪಡೆದು ಅರಣ್ಯೇತರ ಉದ್ದೇಶಕ್ಕೆ ನೀಡಬಹುದಾಗಿರುತ್ತದೆ. ಆದರೆ, ಕರ್ನಾಟಕ ಅರಣ್ಯ ಅಧಿನಿಯಮ, 1963ರ ಅಧ್ಯಾಯ-2ರಲ್ಲಿ ಕಲಂ-5 ರಿಂದ ಕಲಂ-17ರವರೆಗೆ ವಿವರಿಸಿದಂತೆ, ಸೆಕ್ಷನ್-4ರಡಿಯಲ್ಲಿ ಪ್ರಾಥಮಿಕ ಅಧಿಸೂಚನೆ ಹೊರಡಿಸಿರುವ ಪ್ರದೇಶಗಳನ್ನು ಅರಣ್ಯ ವ್ಯವಸ್ಥಾಪನಾಧಿಕಾರಿಗಳು ಅರಣ್ಯ ವ್ಯವಸ್ಥಾಪನ ಪ್ರಕ್ರಿಯೆ ನಡೆಸಿ ಸದರಿ ಜಮೀನುಗಳಲ್ಲಿ ಯಾವುದೇ ವ್ಯಕ್ತಿಯು ತಮ್ಮ ಹಕ್ಕುಗಳ ನೈಜತೆ ಹೊಂದಿದ್ದಲ್ಲಿ ಅಂತಹ ಪ್ರಕರಣಗಳನ್ನು ಪೂರಕ ದಾಖಲೆಗಳೊಂದಿಗೆ ಪರಿಶೀಲಿಸಿ ನಿಯಮಾನುಸಾರ ಕ್ರಮ ಕೈಗೊಂಡು ಸದರಿ ಜಮೀನುಗಳನ್ನು ಅರಣ್ಯ ಪ್ರದೇಶಕ್ಕೆ ಸೇರಿಸುವ ಅಥವಾ ಕೈಬಿಡುವ ಅಧಿಕಾರವನ್ನು ಅರಣ್ಯ ವ್ಯವಸ್ಥಾಪನಾಧಿಕಾರಿಗಳಿಗೆ ಮಾತ್ರ ನೀಡಲಾಗಿರುತ್ತದೆ.

ಸಂಖ್ಯೆ: ಅಪಜೀ 27 ಎಫ್ಎಎಫ್ 2021

(ಅರವಿಂದ ಲಿಂಬಾವಳಿ)
ಅರಣ್ಯ, ಕನ್ನಡ ಮತ್ತು ಸಂಸ್ಕೃತಿ ಸಚಿವರು

Annexure - 1

Details of Areas Notified under section-4, KFA-1963

SL No.	Notification Number and date	Taluk	Hobli	Village	Sy. No.	Extent in Ha	Remarks
1	6	7	8	9	10	11	12
1	AHFF-339-FAF-91, dated:28-06-1991	Ramanagara	Kasaba	Harisandra	37	22.50	
2	AHFF-340-FAF-91, dated:21-06-1991	Ramanagara	Kasaba	Harisandra	87	25.75	
3	AHFF-340-FAF-91, dated:31-05-1991	Ramanagara	Kasaba	Harisandra	37	13.50	
				Bommachanahalli	86	22.50	
				Sugganahalli	257	4.75	
				Total		**89.00**	
4	AHFF-467-FAF-91, dated:06-03-1991	Ramanagara	Kylancha	Hulikere Gunnuru	18	23.25	
				Total		**23.25**	
5	AHFF-338-FAF-91, dated:28-06-1991	Channapatna	Maluru	Gowdagere Block Section-4	82	21.00	
6	AHFF-843-FAF-91, dated:25-06-1991	Channapatna	Maluru	Bevuru Block Section-4	40	3.00	
				Bevuru	116	45.50	
				Total		**69.50**	
7	AHFF-337-FAF-91, dated:01-06-1991	Channapatna	Maluru	Bomma nayakanahalli	383	27.25	
				Honna yakanahalli	154	10.25	
				Total		**37.50**	
8	AHFF-337-FAF-91, dated:01-06-1991	Channapatna	Kasaba	Abburu	67	71.50	
					353	177.25	
				Kannamangala	149	46.50	
				Devarahosahalli	14	73.50	
					18	44.25	
				Elehosahalli	20	73.75	
				Komanahalli	55	28.00	
				Rampura	31	65.50	
				Total		**580.25**	
9	FEE-15-FAF-95, dated: 15-06-1995	Magadi	Kuduru	Biskuru	75	105.60	
10	AHFF-838-FAF-91, dated:09-11-1994	Magadi	Chikkenahalli	Chkkenahalli	39	17.75	
11	AHFF-341-FAF-91, dated:28-06-1991	Magadi	Kasaba	Thirumalapura	54	12.25	
		Magadi	Soluru	Naganahalli	24		
				Total		**135.60**	
12	AHFF-32-FAF-91, dated:22-06-1991	Kanakapura	Kasaba	Aralalu	145	20	
13	AHFF-692-FAF-91, dated:08-06-1991	Kanakapura	Kodihallli	Bhommasandra	19	89.05	
14	AHFF-350-FAF-91, dated:06-06-1991	Kanakapura	Kodihallli	Bhommasandra	30	55.75	
15	AHFF-343-FAF-91, dated:06-06-1991	Kanakapura	Uyyamballi	Chikkoppa	35	109.67	
			Uyyamballi	Doddakoppa	41	61	
16	AHFF-343-FAF-91, dated:06-06-1991	Kanakapura	Kodihallli	Garalapura	102	14.75	
17	AHFF-345-FAF-91, dated:07-06-1991	Kanakapura	Kodihallli	Hunasanakodihalli	47	88.25	
18	AHFF-345-FAF-91, dated:07-06-1991	Kanakapura	Uyyamballi	Kottagalge	20 & 21	54.25	

SL No.	Notification Number and date	Taluk	Hobli	Village	Sy. No.	Extent in Ha	Remarks
1	6	7	8	9	10	11	12
19	AHFF-366-FAF-91, dated:07-06-1991	Kanakapura	Kasaba	Mallapanahosahalli	19	78	
			Virupaxipura	Ujjanahalli	84		
			Virupaxipura	Bukkasagara	9		
			Kasaba	Somedyapanahalli	24		
20	AHFF-347-FAF-91, dated:06-06-1991	Kanakapura	Kasaba	Seegekote	137	182.74	
			Sathanu	Achalu	196	102.25	
21	AHFF-344-FAF-91, dated:21-06-1991	Kanakapura	Kasaba	Shivanahalli	106	82.75	
22	AHFF-14-FAF-88, dated:03-05-1988	Kanakapura	Maralavadi	Goduru	169	61.94	
23	AHFF-80-FAF-88, dated:21-01-1988	Kanakapura	Maralavadi	Kallanakuppe	177, 30	93.11	
24	AHFF-357-FAF-91, dated:21-06-1991	Kanakapura	Sathanu	Kachuvanahalli	54	43.75	
25	AHFF-692-FAF-91, dated:08-06-1991	Kanakapura	Kasaba, Sathanu	Seegekote, Achalu	269	43.25	
26	AHFF-342-FAF-91, dated:08-06-1991 & 06-08-1991	Kanakapura	Sathanu	Bhuhalli	27	68	
				Dunthuru	15	59.25	
27	AHFF-348-FAF-91, dated:01-06-1991	Kanakapura	Sathanu	Thotahalli	62	64.25	
28	AHFF-349-FAF-91, dated:28-06-1991	Kanakapura	Sathanu	Sasalapura	183	67.75	
29	AHFF-352-FAF-91, dated:21-06-1991	Kanakapura	Sathanu	Sasalapura-I	175	21.25	
				GRAND TOTAL		**2396.11**	